ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಸದಸ್ಯರು ಏತಕ್ಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆಂದು ಅರ್ಥವಾಯಿತು. ಎಲ್ಲೆಲ್ಲಿ ರಾಷ್ಟ್ರೀಕರಣಗೊಳಿಸಿದ ರಸ್ತೆಗಳು ಇರುತ್ತವೆಯೋ ಅಲ್ಲೆಲ್ಲ ಸರ್ಕಾರಿ ಬಸ್‌ಗಳನ್ನೇ ಓಡಿಸತಕ್ಕಂಥ ಒಂದು ಶ್ರಮವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ವ್ಯವಹಾರದ ಬಗ್ಗೆ

೪೪೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಉತ್ತರಿಸುವರೆ ?

(ಅ) ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಗೆ ಸರ್ಕಾರದವರು ಯಾವ ಉತ್ಪನ್ನಗಳನ್ನು ಮಾರಾಟ ಮಾಡಲು ಆದೇಶ ನೀಡಿದೆ.

(ಆ) ಈ ಸಂಸ್ಥೆ ಕಳೆದ ೫ ವರ್ಷಗಳಲ್ಲಿ ನಡೆಸಿದ ವ್ಯವಹಾರದ ಮೊತ್ತವೆಷ್ಟು ಹಾಗೂ ಪಡೆದ ಆದಾಯವೆಷ್ಟು ಹಾಗೂ ನಷ್ಟ ವೇನಾದರೂ ತಗಿದೆಯೇ ಹಾಗಿದ್ದಲ್ಲಿ ಅದರ ಮೊತ್ತವೆಷ್ಟು ?

(೫) ಸಾಬೂನು ಕಾರ್ಖಾನೆಯ ಉತ್ಪನ್ನಗಳನ್ನು ಮಾರಾಟ ಮಾಡುವ ಬಗ್ಗೆ ಈ ಸಂಸ್ಥೆ ತಾರತಮ್ಯ ವಹಿಸಿರುವುದರಿಂದ ೬ ಕೋಟಿ ರೂಪಾಯಿ ಬೆಲೆಯ ಉತ್ಪನ್ನಗಳು ಮಾರಾಟವಾಗದೆ ನಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಈ ಕೆಳಕಂಡ ಉತ್ಪನ್ನಗಳನ್ನು ಮಾರಾಟ ಮಾಡುವ ಜವಾಬ್ದಾರಿಯನ್ನು ಎಂ.ಎಸ್.ಐ.ಎಲ್ ಗೆ ವಹಿಸಿಕೊಡಲಾಗಿದೆ.

೧. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಿಂದ ಉತ್ಪಾದಿಸಲ್ಪಟ್ಟ ಎಲ್ಲಾ ಗುರುತುಗಳ ಸಾಬೂನುಗಳು ಮಂತ್ತು ಮಾರ್ಜಕಗಳು, ಗಂಧದ ಎಣ್ಣೆ, ಅಗರ ಭತ್ತಿ ಸ್ಪಿಯರಿಕೆ ಆಮ್ಲ ಮತ್ತು ಗ್ಲಿಸರಿನ್.

೨. ಮೈಸೂರು ಕಾಸ್ಮೆಟಿಕ್ಸ್ ಕಂಪನಿಯ ಉತ್ಪಾದನೆಯಾದ ಟಾಲ್ಕಂ ಪೌಡರ್.

೩. ಮೈಸೂರು ಅಸಿಟೇಟ್ಸ್ ಮತ್ತು ಕಮಿಕಲ್ಸ್ ಕಂಪನಿಯಿಂದ ಉತ್ಪಾದಿಸಲ್ಪಟ್ಟ ಸಿ.ಎ.ಎಂ.ಜಿ. ಮತ್ತು ಅಸಿಟಿಕ್ ಆನ್ ಹೈಡ್ರೈಡ್, ಡಿ.ಇ.ಪಿ.

೪. ನೋಟ್ ಬುಕ್‌ಗಳು

೫. ಲಾಟರಿ ಟಿಕೆಟ್‌ಗಳ ಮಾರಾಟ

೬. ಕರ್ನಾಟಕ ಹಾಲು ಉತ್ಪಾದಕರ ಸಂಘದಿಂದ ಉತ್ಪಾದಿಸಲ್ಪಟ್ಟ ತುಪ್ಪ.

(ಆ) ಒಟ್ಟು ಕ್ರಯವಿಕ್ರಯ	ಒಟ್ಟು ಆದಾಯ	ಒಟ್ಟು ನಷ್ಟ
ಲಕ್ಷ ರೂ. ಗಳಲ್ಲಿ	ಲಕ್ಷಗಳಲ್ಲಿ	
೨೨,೬೬೭–೨೮	೩೨೩–೭೨	—

(೫) ಇಲ್ಲ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಉತ್ಪನ್ನಗಳನ್ನು ಮಾರಾಟ ಮಾಡುವುದರ ಬಗ್ಗೆ ಎಂ. ಎಸ್. ಐ. ಎಲ್. ನಲ್ಲಿ ಕೆಲವು ಕಾರ್ಯನಿರ್ವಹಣ ತೊಂದರೆಗಳು ಉದ್ಭವಿಸಿವೆ. ಎಂ.ಎಸ್.ಐ.ಎಲ್. ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತಗಳೆರಡಕ್ಕೂ ದಾಸ್ತಾನುಗಳು ಉಳಿಯದಂತೆ ನೋಡಿಕೊಳ್ಳಲು ಸರಿಯಾದ ಕ್ರಮತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ. ೨೦–೭–೧೯೮೫ ರಂದು ಕೆ.ಎಸ್.ಡಿ.ಎಲ್. ಉಗ್ರಾಣಗಳಲ್ಲಿ ದಾಸ್ತಾನು ಇರುವ ಉತ್ಪನ್ನಗಳ ಬೆಲೆಯು ೩೧೪.೦೯ ಲಕ್ಷ ರೂ. ಆಗಿರುತ್ತದೆ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಎಂ.ಎಸ್ ಐ.ಎಲ್. ಇದರ ಮುಖಾಂತರ ೪–೫ ವಸ್ತುಗಳನ್ನು ಮಾರಾಟ ಮಾಡತಕ್ಕಂಥದ್ದು ಹೇಳಿರುತ್ತಾರೆ. ಈ ವಸ್ತುಗಳ ಮಾರಾಟದಿಂದ ಲಾಭ ಬರುತ್ತಿದೆಯೇ ಎಂದು ಕೇಳಿರುವುದಕ್ಕೆ, ಇಲ್ಲಿ ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ೩೨೩ ಲಕ್ಷ ರೂಪಾಯಿಗಳು ಲಂಕ್ಸ್ಸನು ಬಂದಿರುತ್ತದೆಂದು ತಿಳಿದುಬರುತ್ತದೆ. ಯಾವ ವಸ್ತುಗಳ ಮಾರಾಟದಿಂದ ಲಂಕ್ಸ್ಸನಾಗಿರುತ್ತದೆ ಎಂಬುದಕ್ಕೆ ಉತ್ತರ ಬೇಕು? ಗಂಧದ ಎಣ್ಣೆಯ ಮಾರಾಟದಿಂದಲೋ ಲೇಖಿಕ್ ನೋಟ್ ಪುಸ್ತಕಗಳನ್ನು ಮಾರಾಟ ಮಾಡುವುದರಿಂದಲೋ ಅಥವಾ ಕರ್ನಾಟಕ ಹಾಲು ಉತ್ಪಾದಕರ ಸಂಘದಿಂದ ಉತ್ಪಾದಿಸಲ್ಪಟ್ಟ ತುಪ್ಪದ ಮಾರಾಟದಿಂದಲೋ ಎನ್ನುವುದಕ್ಕೆ ವಿವರವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಲಂಕ್ಸ್ಸನು ಯಾವ ಪದಾರ್ಥದಿಂದ ಆಗುತ್ತಿದೆ ಎಂದು ಕೊಟ್ಟಿಲ್ಲ. ೩೨೩ ಲಕ್ಷ ರೂಪಾಯಿಗಳು ಆದಾಯ ಬಂದಿರುತ್ತದೆಂದು ಹೇಳಲಾಗಿದೆ. ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಮೂಲತಃ ಮಾರಾಟ ಮಾಡತಕ್ಕಂಥ ಒಂದು ಸಂಸ್ಥೆಯಾಗಿರುತ್ತದೆ. ಮೈಸೂರು ಸ್ಯಾಂಡಲ್ ಸೋಪ್ ಮತ್ತು ಡಿಟರ್‌ಜೆಂಟ್ ಉತ್ಪಾದನೆ ಮಾಡತಕ್ಕಂಥ ಕಾರ್ಖಾನೆಯ ಎಲ್ಲ ವಸ್ತುಗಳನ್ನು ಮಂತ್ರಿ ಸರ್ಕಾರಿ ವಲಯದಲ್ಲಿ ಉತ್ಪಾದನೆ ಮಾಡತಕ್ಕಂಥ ವಸ್ತುಗಳನ್ನು ಮಾರಾಟ ಮಾಡುವ ಸಲುವಾಗಿ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಪಬ್ಲಿಸ್ಸಿಯೆಂದು ಮಾಡಿದ್ದೇವೆ. ಇದು ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟು ಮಾರಾಟ ಮಾಡತಕ್ಕಂಥ ಯೂನಿಟ್ಸ್‌ಗಳನ್ನು ಹೊಂದಿರುತ್ತದೆ. ಈ ಸಂಸ್ಥೆಯು ವಿದೇಶಗಳಲ್ಲಿಯೂ ಒಳ್ಳೆಯ ಹೆಸರನ್ನು ಪಡೆದಿರುತ್ತದೆ. ಇದರ ಬಗ್ಗೆ ಏನೂ ವಿಷಯಗಳು ಗೊತ್ತಿಲ್ಲದೆ ಯಾರೋ ಕೊಟ್ಟಂಥ ತಪ್ಪು ಮಾಹಿತಿಯನ್ನು ಇಟ್ಟುಕೊಂಡು ಕೇಳುತ್ತಿರುವಂತೆ ತಿಳಿಯುತ್ತದೆ. ದಯವಿಟ್ಟು ತಿದ್ದಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಆರು ಕೋಟಿ ರೂಪಾಯಿಗಳ ಮಾಲು ಉಳಿದಿದೆ ಎಂದು ಹೇಳಬೇಕಾದರೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ರವರದು ಏನು ಎಫಿಷಿಯನ್ಸಿ ಬಂತು. ಆರು ಕೋಟಿ ರೂಪಾಯಿಗಳ ಮಾಲು, ಉಳಿಯಲು ಹೇಗೆ ಸಾಧ್ಯವಾಯಿತು? ಭದ್ರಾವತಿ ಕಬ್ಬಿಣದ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿದೆ ಎಂದು ಟಾಟಾರವರಿಗೆ ಕೊಡುತ್ತೇವೆಂದು ಹೇಳುವಂತೆ ಅನೇಕ ಸಹಕಾರಿ ಸಂಘಗಳು ಅವರಿಗೆಲ್ಲರಿಗೂ ಈ ಸೇಲ್ಸ್ ಏಜೆನ್ಸಿಯನ್ನು ಕೊಡುತ್ತೀರಾ? ಆರು ಕೋಟಿ ರೂಪಾಯಿಗಳ ಮಾಲು ಉಳಿದಿರಬೇಕಾದರೆ ಅವರ ಎಫಿಷಿಯನ್ಸಿ ಎಷ್ಟು ಎಂದು ತೋರಿಸುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಆರು ಕೋಟಿ ರೂಪಾಯಿಗಳ ವಸ್ತುಗಳು ದಾಸ್ತಾನು ಇರುವುದಿಲ್ಲ. ಪತ್ರಿಕೆಗಳಲ್ಲಿ ೧೫ ಕೋಟಿ ರೂಪಾಯಿಗಳಷ್ಟು ವಸ್ತುಗಳು ಸ್ಟಾಕ್ ಇದೆ ಎಂದು ಬಂದಿದೆ. ಫ್ಯಾಡಕ್ಟ್ಸ್ ಅಂದರೆ ಫಿನಿಷ್ಡ್ ಗೂಡ್ಸ್, ಮತ್ತು ಇಡೀ ಕಾರ್ಖಾನೆಯಲ್ಲಿ ಇರತಕ್ಕಂಥ ಎಲ್ಲ ಮೆಷಿನರೀಸ್‌ಗಳನ್ನು ಕೇರಿಸಿದರೆ ೧೬ ಕೋಟಿ ರೂಪಾಯಿಗಳಾಗುತ್ತದೆ. ವಾಸ್ತವವಾಗಿ ಸೋಪ್ಸ್ ಅಂಡ್ ಡಿಟರ್‌ಜಂಟ್ಸ್ ಉತ್ಪಾದನೆ ಮಾಡತಕ್ಕಂಥ ವಸ್ತುಗಳು ಮೂರು ಕೋಟಿ ರೂಪಾಯಿಗಳು. ಪವರ್ ಕಟ್ ಅಥವಾ ಇನ್ನಿತರ ಯಾವುದೇ ಕಾರಣದಿಂದ ೧೦–೧೫ ದಿವಸಗಳು ಕಾರ್ಖಾನೆಯು ನಿಲ್ಲುವಂಥ ಪ್ರಸಂಗ ಬಂದಾಗ ನಮ್ಮ ಹತ್ತಿರ ಏನು ಸ್ಟಾಕ್ ಇಲ್ಲದಿರುವುದು ಒಳ್ಳೆಯದಲ್ಲ ಡಿಮ್ಯಾಂಡ್ ಬಂದಾಗ ಪೂರೈಸಲು ಸ್ಟಾಕ್ ಇಟ್ಟುಕೊಳ್ಳಬೇಕಾಗುತ್ತದೆ, ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಮನಸ್ಸಿನಲ್ಲಿ ಏನೂ ಗಾಬರಿ ಪಡಬೇಕಾದ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯವರು ಈ ಬಗ್ಗೆ ತಪ್ಪು ಮಾಡುತ್ತಿದ್ದಾರೆ. ಇದು ಕೇವಲ ನಮ್ಮ ಮನಸ್ಸಿನಲ್ಲಿ ಬಂದಿರತಕ್ಕಂಥ ವಿಚಾರವಲ್ಲ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ರವರ ವಿಚಾರವೂ ಇಲ್ಲ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಯಾರು ಇದ್ದಾರೋ ಅವರು ಒಂದು ಕಡೆ ಈ ಕಾರ್ಖಾನೆಯನ್ನು ಮುಚ್ಚಬೇಕೆಂದು ಹೇಳಿಕೆ ಕೊಟ್ಟರುವುದರ ಜೊತೆಗೆ ಬಹಳ ಪ್ರಭಲವಾದ ಅಪವಾದವನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ಸ್‌ರವರ ಮೇಲೆ ಹೊರಿಸಿದ್ದಾರೆ. ಆದರೆ ನಮ್ಮ ಮಂತ್ರಿಗಳು ಅಲ್ಲಿ ಉತ್ತಮವಾಗಿ ಕೆಲಸ ನಡೆಯುತ್ತಿದೆ ಎಂದು ಹೇಳಿದ್ದಾರೆ. ಇಂಥ ಸಂದರ್ಭದಲ್ಲಿ ತಮ್ಮ ತಪ್ಪುಗಳನ್ನು ಮುಚ್ಚಿ ಕೊಳ್ಳುವುದಕ್ಕೋಸ್ಕರವಾಗಿ ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಈ ರೀತಿ ಹೇಳಿಕೆ ಕೊಡುವುದಕ್ಕೆ ಯಾವ

ವರ್ತಮಾನ ನಿಮ್ಮ ಬಳಿ ಇದೆ? ಅಂಥ ಹೇಳಿಕೆಯನ್ನು ಅವರು ಕೊಟ್ಟಿರುವುದರಿಂದ ಅವರ ಮೇಲೆ ನಿಶ್ಚಿತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜೆ. ಎಚ್. ಪಟೇಲ್.—ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಮತ್ತು ಸರ್ಕಾರಿ ಕೆ.ಎಸ್.ಡಿ.ಎಲ್. ಸೋಪ್ಸ್ ಅಂಡ್ ಡಿಟರ್‌ಜೆಂಟ್ ಇವು ಸರ್ಕಾರಿ ಸಂಸ್ಥೆಗಳಾಗಿದ್ದು. ಇದರಲ್ಲಿ ಆಡಳಿತವನ್ನು ನಿರ್ವಹಿಸತಕ್ಕಂಥ ಅಧಿಕಾರಿಗಳಲ್ಲಿ ಬೇಜವಾಬ್ದಾರಿತನ ಇದ್ದರೆ ಹೇಗೆ ತಿದ್ದಬೇಕೋ ಅದನ್ನು ಎಚ್ಚರಿಕೆಯಿಂದ ತಿದ್ದುವ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಹೇಳಿಕೆಯಿಂದ ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಆ ಸಂಸ್ಥೆಯ ಬಗ್ಗೆ ಹೇಳಿಕೆ ಕೊಟ್ಟಿರುವುದು ನಮ್ಮ ಸರ್ಕಾರಕ್ಕೆ ಅಧಿಕೃತವಾಗಿ ಬಂದಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಸಚಿವರು ಉತ್ತರ ಕೊಡುತ್ತಾ, ಈ ಸಂಸ್ಥೆಯು ಉತ್ತಮವಾದ ಹೆಸರು ಪಡೆದಂಥ ಸಂಸ್ಥೆಯಾಗಿದೆ ಎಂದು ಹೇಳಿರುತ್ತಾರೆ. ಅವರು ಹೇಳಿದ ಪ್ರಕಾರ ಇದು ಒಂದು ಉತ್ತಮವಾದ ಸಂಸ್ಥೆಯಾಗಿದೆ. ಆದರೆ ಹೇಗಾದರೂ ಮಾಡಿ ಈ ಎಂ.ಎಸ್ ಐ.ಎಲ್ ಸಂಸ್ಥೆಯ ಹೆಸರನ್ನು ಕೆಡಿಸಿ ಖಾಸಗಿಯವರಿಗೆ ಮಾರಾಟ ಮಾಡತಕ್ಕಂಥ ಒಂದು ಪಿತೂರಿ ಅವರು ಮಾಡುತ್ತಿದ್ದಾರೆ. ಡಂಕನ್ ಪ್ರೈವೇಟ್ ಕಂಪನಿಯವರಿಗೆ ಸೋಪ್ಸ್ ಮತ್ತು ಡಿಟರ್‌ಜೆಂಟ್ ಮಾರಾಟ ಮಾಡತಕ್ಕಂಥ ಪಿತೂರಿ ನಡೆದಿದೆ. ಸ್ಟಾಕ್ ಜಾಸ್ತಿ ಇದ್ದರೆ ಸೇಲ್ಸ್ ವರದಿಯನ್ನು ಕಳುಹಿಸಿಕೊಡಿ ಎಂದು ಅವರನ್ನು ಕೇಳಿದರೆ ಅದಕ್ಕೆ ಅವರು ವರದಿಯನ್ನು ಕಳುಹಿಸದೆ ಇರತಕ್ಕಂಥ ವಿಚಾರ ತಮ್ಮ ಗಮನಕ್ಕೆ ಬಂದಿರುತ್ತದೆಯೇ? ಆ ರೀತಿ ಬಂದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಿ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಪಿತೂರಿ ಏನೂ ನಡೆದಿಲ್ಲ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನಲ್ಲಿ ಇವತ್ತು ಉತ್ಪಾದನಾ ಸಾಮರ್ಥ್ಯ ಮೂರು ಪಟ್ಟು ಜಾಸ್ತಿಯಾಗಿದೆ. ಈಗ ಹನ್ನೆರಡು ಸಾವಿರ ಟನ್ ಕೆಪಾಸಿಟಿ ಇದೆ. ಆಕ್ಟ್ಯುಲ್ ಆರು ಸಾವಿರ ಟನ್ ಕೆಪಾಸಿಟಿ ಪ್ರೊಡಕ್ಷನ್ ಮಾಡಿದ್ದೆವು. ವಿದೇಶಿ ಕೊಲಾಬರೇಷನ್ ಅವರಿಂದ ಪ್ರೊಡಕ್ಷನ್ ಕೆಪಾಸಿಟಿ ಮೂರು ಪಟ್ಟು ಜಾಸ್ತಿಯಾಗಿದೆ. ಆದ್ದರಿಂದ ಈಗ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ನಲ್ಲಿಯೂ ನಾವು ಹಲವಾರು ಸುಧಾರಣೆಯನ್ನು ತರಬೇಕಾಗಿದೆ. ಕಳೆದ ಒಂದೆರಡು ವರ್ಷಗಳಿಂದ ಸೇಲ್ ಡ್ರಾಪ್ ಆಗಿತ್ತು. ಎರಡು ಸಂಸ್ಥೆಗಳ ಮಧ್ಯೆ ಭಿನ್ನಾಭಿಪ್ರಾಯ ಇತ್ತು. ನಾನು ಬೊಂಬಾಯಿಗೆ ಹೋಗಿದ್ದಾಗ ಎಂ.ಎಸ್.ಐ.ಎಲ್. ಶಾಖೆಯವರೇ ನನ್ನ ಹತ್ತಿರ ಹೇಳಿದರು. ಬರತಕ್ಕಂಥ ವಸ್ತುಗಳ ಗುಣಮಟ್ಟ ಕಡಿಮೆಯಾಗಿತ್ತಿದೆ. ಇದನ್ನು ಸರಿಪಡಿಸಬೇಕೆಂದು ಹೇಳಿದರು ಸ್ಟಾಕ್ ಇಟ್ಟುಕೊಂಡಿರುವುದರಿಂದ ಎಂ.ಎಸ್.ಐ.ಎಲ್ ನ ಕೆಲವು ಅಧಿಕಾರಿಗಳು ಬಂದು ನನ್ನ ಹತ್ತಿರ ಹೇಳಿದರು. ಎರಡು ಸಂಸ್ಥೆಗಳಲ್ಲಿರತಕ್ಕಂಥ ಅಧಿಕಾರಿಗಳು ಬೇಜವಾಬ್ದಾರಿತನದಿಂದ ವರ್ತನೆ ಮಾಡಿದರೆ ಅದನ್ನು ಕೊಡೆದುಹಾಕಿ ಆ ಎರಡು ಸಂಸ್ಥೆಗಳು ಉದ್ಧಾರವಾಗುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ತಿಳಿಸುತ್ತೇನೆ. ಈ ಎರಡು ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳೇ ಆಗಿರುವುದರಿಂದ ಸಣ್ಣಪುಟ್ಟ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ನಾನು ಬಹಳ ದೊಡ್ಡದು ಮಾಡುವುದು, ಅಥವಾ ದೊಡ್ಡದಾಗಿ ಅದನ್ನು ಪರಿಗಣನೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿರತಕ್ಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಸಂಸ್ಥೆಗೆ ಸರ್ಕಾರದ ಅಡಿಷನಲ್ ಚೀಫ್ ಸೆಕ್ರೆಟರಿಯವರೇ ಛೇರ್ಮನ್ ಆಗಿದ್ದಾರೆ. ಮಾನ್ಯ ಸದಸ್ಯರು ಹೇಳಿರುವ ಒಂದು ಮಾತು ನಿಜ. ಎಂ.ಎಸ್.ಐ.ಎಲ್‌ನವರು ಮಾರಾಟ ಮಾಡುತ್ತಾರೆ ಎಂದು ಹೇಳಿರುತ್ತಾರೆ. ಎಂ.ಎಸ್.ಐ.ಎಲ್.ನವರು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ನ್ನು ಮಾರಾಟ ಮಾಡುದೇ ಹೊರತು ಹೆಚ್ಚು ಕೆಲಸ ಎಂ.ಎಸ್ ಐ.ಎಲ್.ನವರಿಗೇ ಇರುವುದಿಲ್ಲ. ಮೊದಲನೇ ಕೆಲಸ ಶೇಕಡ ೩ರಲ್ಲಿ ೨ರಷ್ಟು ಕೆಲಸ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಮಾರುವುದು. ಈ ಎರಡು ಸಂಸ್ಥೆಗಳನ್ನು ಬೆಳೆಸುವುದಕ್ಕೆ ಇನ್ನು ಯೋಜನೆ ಮಾಡಬೇಕು. ಸರ್ಕಾರದವರು ಎರಡು ಸಂಸ್ಥೆಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.